# ಜಾಕ್ ಮಾ ರಿಟೈರ್ಡ್

ಜಾಕ್ ಮಾ! ಮೂರ್ತಿ ಚಿಕ್ಕದಾದರೂ ಕೀರ್ತಿ ಭಾರೀ ದೊಡ್ಡದು. 5 ಅಡಿ 3 ಇಂಚು ಎತ್ತರದ ಈ ವಾಮನ ಮೂರ್ತಿ, 20 ವರ್ಷಗಳ ಹಿಂದೆ ‘ಆಲಿಬಾಬಾ’ ಎನ್ನುವ ಕಂಪನಿಯನ್ನು 18 ಜನ ಸ್ನೇಹಿತರ ಜೊತೆಗೆ ಸೇರಿ ತನ್ನ ಪುಟ್ಟ ಅಪಾರ್ಟ್‌ಮೆಂಟ್‌ನಲ್ಲಿ ಆರಂಭಿಸಿದಾಗ, ಉದ್ದೇಶ ಇದ್ದದ್ದು ಇ–ರಿಟೇಲ್ ವ್ಯಾಪಾರ ಮಾತ್ರ. ಆದರೆ ಈ ಕಂಪನಿ ಕಳೆದ 20 ವರ್ಷಗಳಲ್ಲಿ ಜಾಕ್ ಮಾ ನೇತೃತ್ವದಲ್ಲಿ ಎಷ್ಟೊಂದು ದೊಡ್ಡ ಬಹುರಾಷ್ಟ್ರೀಯ ಟೆಕ್ ಕಂಪನಿಯಾಗಿ ಬೆಳೆಯಿತೆಂದರೆ, 2014ರಲ್ಲಿ ಮೊದಲ ಬಾರಿಗೆ ಸಾರ್ವಜನಿಕ ಷೇರುಪೇಟೆಯನ್ನು ಪ್ರವೇಶಿಸಿದಾಗ, ಷೇರು ಸಂಗ್ರಹದ ಜಾಗತಿಕ ದಾಖಲೆಗಳನ್ನು ಮುರಿದಿಕ್ಕಿತು. ಇವತ್ತು ಆ ಕಂಪನಿ 500 ಶತಕೋಟಿ ಡಾಲರ್ ಮೌಲ್ಯದ ಕಂಪನಿಯಾಗಿದ್ದು, ಏಷ್ಯಾದಲ್ಲಿ 500 ಶತಕೋಟಿ ಡಾಲರ್ ಮೌಲ್ಯ ದಾಟಿದ ಎರಡನೇ ಟೆಕ್ ಕಂಪನಿ ಎಂದು ಹೆಸರು ಪಡೆದಿದೆ.

20 ವರ್ಷಗಳ ಕಾಲ ಪೋಷಿಸಿದ ಕಂಪನಿಯ, ಎಕ್ಸಿಕ್ಯೂಟಿವ್ ಚೇರ್‌ಮನ್ ಹುದ್ದೆಗೆ ಜಾಕ್ ಮಾ ವಿದಾಯ ಹೇಳಿದ್ದಾರೆ. ಕಂಪನಿಯ ಸಹಸ್ರಾರು ನೌಕರರು 20ನೇ ವಾರ್ಷಿಕೋತ್ಸವದ ಸಂಭ್ರಮವನ್ನು ಆಚರಿಸುತ್ತಿರುವಾಗಲೇ ಜಾಕ್ ಮಾ ತಮ್ಮ ವಿದಾಯದ ಭಾಷಣ ನೀಡಿದ್ದಾರೆ. ಆದರೆ ಅವರ ಪ್ರಕಾರ ಅದು ದುಃಖದ ಸಂದರ್ಭ ಅಲ್ಲ. ಹಾಗೆಂದೇ ಸಮಾರಂಭದಲ್ಲಿ ಅವರು ರಾಕ್ ಸಂಗೀತಗಾರನಂತೆ ಗೋಲ್ಡನ್ ಜಾಕೆಟ್ ಧರಿಸಿ, ಗಿಟಾರ್ ಕೈಯಲ್ಲಿ ಹಿಡಿದು ಹಾಡುತ್ತಾ ಕುಣಿದರು. ‘ಈ ನಿವೃತ್ತಿ ಒಬ್ಬ ವ್ಯಕ್ತಿಯ ಆಯ್ಕೆಯ ವಿಷಯವಲ್ಲ, ಒಂದು ವ್ಯವಸ್ಥೆಯ ಯಶಸ್ಸಿನ ದ್ಯೋತಕ’ ಎಂದು ಜಾಕ್ ಮಾ ಆ ಸಮಾರಂಭದಲ್ಲಿ ಹೇಳಿದ ಮಾತು, ಜಗತ್ತಿನ ಬಹುತೇಕ ದೈತ್ಯ ಕಂಪನಿಗಳ ಮುಖ್ಯಸ್ಥರಿಗೆ ಹೇಳಿದ ಕಿವಿಮಾತಿನಂತಿತ್ತು.

ಹಾಡು ಮತ್ತು ಕುಣಿತ ಜಾಕ್ ಮಾ ಗೆ ಹೊಸತೇನಲ್ಲ. ಜಗತ್ತಿನ ದೈತ್ಯ ಕಂಪನಿಯೊಂದರ ಧಣಿ ಆಗಿದ್ದರೂ ಆತ ನೌಕರರ ಜೊತೆಗೆ ಊಟ ಮಾಡಿಕೊಂಡು ಸರಳವಾಗಿಯೇ ಇರುತ್ತಿದ್ದ. ಕಂಪನಿಯ ಹತ್ತನೇ ವಾರ್ಷಿಕೋತ್ಸವದ ಸಮಾರಂಭದಲ್ಲಿ ಸುಪ್ರಸಿದ್ಧ ಪಾಪ್ ಗಾಯಕಿ ಲೇಡಿ ಗಾಗಾಳಂತೆ ಡ್ರೆಸ್ ಮಾಡಿಕೊಂಡು ‘ಲಯನ್ ಕಿಂಗ್’ನ ಹಾಡು ಹಾಡಿದ್ದರೆ, 18ನೇ ವಾರ್ಷಿಕೋತ್ಸವದಲ್ಲಿ ಮೈಕಲ್ ಜಾಕ್ಸನ್‌ನಂತೆ ಡ್ರೆಸ್ ಮಾಡಿಕೊಂಡು ಆತನ ಹಾಡು ಹಾಡಿದ್ದ. ಆಲಿಬಾಬಾ ಕಂಪನಿಯ ಆಡಳಿತ ಮಂಡಳಿಯಲ್ಲಿ ಮುಂದಿನ ವರ್ಷದವರೆಗೆ ಜಾಕ್ ನಿರ್ದೇಶಕರಾಗಿ ಉಳಿಯಲಿದ್ದಾರೆ. ಆಲಿಬಾಬಾ ಉದ್ಯಮ ಗುಂಪಿನ ಆಡಳಿತ ಮಂಡಳಿಯಾಗಿರುವ ಆಲಿಬಾಬಾ ಪಾರ್ಟ್‌ನರ್‌ಷಿಪ್‌ನಲ್ಲಿ ಅವರು ಆಜೀವ ಸದಸ್ಯರಾಗಿ ಉಳಿಯಲಿದ್ದಾರೆ. ಜಾಕ್ ಉತ್ತರಾಧಿಕಾರಿಯಾಗಿ ಕಂಪನಿಯ ಸಿಇಓ ಡೇನಿಯಲ್ ಝುಂಗ್ ಅಧಿಕಾರ ವಹಿಸಿಕೊಂಡಿದ್ದಾರೆ.



ಜಾಕ್ ಮಾ ನಿವೃತ್ತಿಯಾದ ಸೆಪ್ಟೆಂಬರ್ 10ಕ್ಕೆ ಟೆಕ್ ಜಗತ್ತಿನಲ್ಲಿ ಈಗ ಹೊಸ ಮಹತ್ವವೊಂದು ಪ್ರಾಪ್ತಿಯಾಗಿದೆ. ಈ ಹಿಂದೆ ಆ್ಯಪಲ್ ಕಂಪನಿ ತನ್ನ ಮೊತ್ತಮೊದಲ ಐಫೋನ್ ಅನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿದ ದಿನ. ಈಗ ಆ ದಿನಾಂಕವನ್ನು ಟೆಕ್ಕಿಗರು ಜಾಕ್ ಮಾ ನಿವೃತ್ತಿಯ ದಿನವೆಂದೂ ನೆನಪಿಟ್ಟುಕೊಳ್ಳಲಿದ್ದಾರೆ. ಆಲಿಬಾಬಾ ಕಂಪನಿಗೆ ಅದು ಹುಟ್ಟಿದ ದಿನವೂ ಹೌದು.

54 ವರ್ಷ ನಿವೃತ್ತಿಯ ವಯಸ್ಸೇನೂ ಅಲ್ಲ. ಆದರೆ ಚೀನಾದ ಅತಿದೊಡ್ಡ ಶ್ರೀಮಂತನೆಂದು ಈಗಾಗಲೆ ಫೋರ್ಬ್ಸ್ ಪಟ್ಟಿಯಲ್ಲಿ ಹೆಸರು ಪಡೆದಿರುವ ಜಾಕ್ ಮಾ, ತನ್ನ ನಿವೃತ್ತಿಯ ಬಗ್ಗೆ ಎರಡು ವರ್ಷಗಳ ಹಿಂದೆಯೇ ಸೂಚನೆ ನೀಡಿದ್ದರು.

ಜಾಕ್ ಮಾ ನಿವೃತ್ತಿಯ ಬಳಿಕ ಕಂಪನಿ ಭವಿಷ್ಯ ಹೇಗೆ ಎನ್ನುವ ಪ್ರಶ್ನೆ ಸಹಜ. ಜಾಕ್ ಪ್ರಕಾರ, ಏನೇನೂ ತೊಂದರೆಯಿಲ್ಲ, ಕಂಪನಿ ಇನ್ನಷ್ಟು ಎತ್ತರಕ್ಕೆ ಬೆಳೆಯುತ್ತದೆ. ‘2013ರಲ್ಲೇ ನಾನು ಸಿಇಓ ಹುದ್ದೆ ಬಿಟ್ಟುಕೊಟ್ಟೆ. ಬಳಿಕ ಐದು ವರ್ಷಗಳ ಅವಧಿಯಲ್ಲಿ ಕಂಪನಿ ಇನ್ನಷ್ಟು ಶಕ್ತಿಶಾಲಿಯಾಗಿ ಬೆಳೆದಿದೆ. ನನ್ನ ತಂಡದ ಬಗ್ಗೆ ನನಗೆ ವಿಶ್ವಾಸವಿದೆ’ ಎನ್ನುವುದು ಮಾ ಸ್ಪಷ್ಟನುಡಿ.

ಜಾಕ್ ಮಾ ನಿವೃತ್ತಿ ಚೀನಾ ಟೆಕ್ ಕಂಪನಿಗಳಿಗೆ ಕಷ್ಟಕಾಲ ತರಲಿದೆ ಎನ್ನುವ ಅಭಿಪ್ರಾಯವೂ ಇದೆ. ಚೀನಾದಲ್ಲಿ ಟೆಕ್ ಉದ್ಯಮದ ಮುಂದಾಳ್ತನ ವಹಿಸಿಕೊಂಡು ಜಾಕ್ ಮಾ, ಚೀನಾ ಸರ್ಕಾರ ಹಾಗೂ ಅಂತರರಾಷ್ಟ್ರೀಯ ಟೆಕ್ ಸಮುದಾಯದ ಜೊತೆಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡಿದ್ದರು. ಈಗ, ಒಂದೆಡೆ ಚೀನಾ ಸರ್ಕಾರ ಟೆಕ್ ಕಂಪನಿಗಳ ಮೇಲೆ ಹದ್ದಿನ ಕಣ್ಣಿಟ್ಟಿದೆ, ಇನ್ನೊಂದೆಡೆ ಅಮೆರಿಕ ಮತ್ತು ಚೀನಾ ನಡುವಣ ‘ವ್ಯಾಪಾರ ಸಮರ’ದಲ್ಲಿ ಚೀನಾದ ಟೆಕ್ ಕಂಪನಿಗಳು ಸಂಕಷ್ಟ ಎದುರಿಸುತ್ತಿವೆ. ಈ ಹಿನ್ನೆಲೆಯಲ್ಲಿ ಜಾಕ್ ಮಾ ನಿವೃತ್ತಿಯ ಪರಿಣಾಮಗಳ ಬಗ್ಗೆ ಟೆಕ್‌ವಲಯದಲ್ಲಿ ಚರ್ಚೆ ಶುರುವಾಗಿದೆ. ಜಾಕ್ ಮಾ ಇಷ್ಟು ಚಿಕ್ಕ ವಯಸ್ಸಿನಲ್ಲಿ ನಿವೃತ್ತಿ ಪ್ರಕಟಿಸಬಾರದಿತ್ತು ಎನ್ನುತ್ತಿದೆ ಚೀನಾ ಟೆಕ್ ಉದ್ಯಮ. ಜನಸಾಮಾನ್ಯರು ಮಾತ್ರ, ‘ಜಾಕ್ ಮಾ ಕಳೆದ ವರ್ಷ ಹೇಳಿದ ತಮ್ಮ ಮಾತಿನಂತೆ ನಡೆದುಕೊಂಡಿದ್ದಾರೆ. ಬೇರೆ ಉದ್ಯಮಿಗಳೂ ಈ ಮಾದರಿಯನ್ನು ಅನುಸರಿಸಬೇಕು’ ಎನ್ನುತ್ತಿದ್ದಾರೆ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65